

# ಕಲಿಕೆಗೆ ಜೀವ ತುಂಬಿದ ಅವಿರತ



**ಸಮಾನಮನಸ್ಕರು ಸೇರಿ ಸಮಾಜಮುಖಿ ನೆಲೆಗಟ್ಟಿನಲ್ಲಿ ಕಟ್ಟಿದ ‘ಅವಿರತ’ ತಂಡ, ಶಿಕ್ಷಣ, ಪರಿಸರ, ಕಲೆ, ಭಾಷೆ–ಸಂಸ್ಕೃತಿ, ಆರೋಗ್ಯ, ಈ ಪಂಚಸೂತ್ರಗಳೊಂದಿಗೆ ಸುಧಾರಣೆಯತ್ತ ಹೆಜ್ಜೆಹಾಕುತ್ತಿದೆ.**

**■ ಶಶಿಕುಮಾರ್ ಸಿ.**

ಬದುಕು ಕಟ್ಟಿಕೊಳ್ಳಲು ನೆರವಾದ ಸಮಾಜಕ್ಕೆ ಏನನ್ನಾದರೂ ಮರು ಸಂದಾಯ ಮಾಡಬೇಕೆಂಬ ತುಡಿತ ಹೊಂದಿದ ಸಮಾನ ಮನಸ್ಕರು ಒಟ್ಟುಗೂಡಿ 2007ರಲ್ಲಿ ಕಟ್ಟಿದ ತಂಡವೇ ‘ಅವಿರತ’.

ನಿರ್ದಿಷ್ಟ ಧ್ಯೇಯದೊಂದಿಗೆ ಹುಟ್ಟಿದ ಈ ತಂಡ ಪಂಚವಾರ್ಷಿಕ ಯೋಜನೆಯಂತೆ ಶಿಕ್ಷಣ, ಕಲೆ, ಭಾಷೆ–ಸಂಸ್ಕೃತಿ, ಆರೋಗ್ಯ, ಪರಿಸರ ಎಂಬ ಐದು ಅಂಶಗಳನ್ನು ತನ್ನ ಮಾನದಂಡವಾಗಿಟ್ಟುಕೊಂಡು ಆ ನಿಟ್ಟಿನಲ್ಲಿ ತಮ್ಮಿಂದಾಗುವ ನೆರವನ್ನು ಅವಿರತವಾಗಿ ನೀಡುತ್ತಾ ಬಂದಿದೆ.

‘ಎದೆಗೆ ಬಿದ್ದ ಅಕ್ಷರ ಭೂಮಿಗೆ ಬಿದ್ದ ಬೀಜ ಒಂದಲ್ಲ ಒಂದು ದಿನ ಫಲ ಕೊಟ್ಟೇ ಕೊಡುತ್ತದೆ...’– ದೇವನೂರು ಮಹಾದೇವ ಅವರ ಈ ಮಾತಿನ ಸಾರವನ್ನು ಅಚಲವಾಗಿ ನಂಬಿರುವ ಅವಿರತ ತಂಡವು, ಗ್ರಾಮೀಣ ಮಕ್ಕಳಿಗೆ ನೀಡುವ ನೆರವು ಭವಿಷ್ಯದಲ್ಲಿ ಸಮಾಜಕ್ಕೆ ಫಲ ಕೊಟ್ಟೇ ಕೊಡುತ್ತದೆ ಎಂದೇ ಭಾವಿಸಿದೆ. ಆ ನಿಟ್ಟಿನಲ್ಲಿ ಹಳ್ಳಿಗಾಡಿನ ಮಕ್ಕಳ ಓದಿಗೆ, ಅಭ್ಯಾಸಕ್ಕೆ ಅಗತ್ಯವಾದ ಪಠ್ಯ ಸಾಮಗ್ರಿಗಳನ್ನು ಒದಗಿಸುವುದನ್ನೇ ಪ್ರತಿವರ್ಷ ಕಾಯಕವಾಗಿಸಿಕೊಂಡು ರಾಜ್ಯದ ಮೂಲೆ ಮೂಲೆಗೂ ಸಹಾಯಹಸ್ತ ಚಾಚಿದೆ.

ಗ್ರಾಮೀಣ ಮಕ್ಕಳ ಕಲಿಕೆಗೆ ಬೆನ್ನೆಲುಬಾಗಿರುವ ಈ ತಂಡವು ಬಹುಮುಖ್ಯವಾಗಿ ಸರ್ಕಾರಿ ಶಾಲೆ,